**ದಿನಾಂಕಃ 28.07.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಎಲ್ ವಿ., 9 ರಿಂದ 11 ನೇ ಪ್ರತಿವಾದಿ ಪರ ವಕೀಲರಿಂದ**

ಸಾಕ್ಷಿಯು ಕನ್ನಡ ಭಾಷೆ ಬರುವುದಿಲ್ಲ ತೆಲುಗು ಭಾಷೆ ಬರುತ್ತದೆ ಎಂದು ಹೇಳಿದ್ದರಿಂದ ಕನ್ನಡ ಮತ್ತು ತೆಲುಗು ಭಾಷೆ ತಿಳಿದಿರುವ ಶ್ರೀ ಬಿ ವಿ ವಿ., ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು. ಭಾಷಾ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

2. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಸೇರಿದ ಜಮೀನಿನ ಸರ್ವೇ ನಂ. 5 ಗೋಣಿಗುಪ್ಪ, ಮುಳಬಾಗಿಲು ತಾಲೂಕಿನಲ್ಲಿರುತ್ತದೆ. ಸದರಿ ಜಮೀನಿನ ಪಹಣಿ ನನ್ನ ಹೆಸರಿನಲ್ಲಿ ಬರುತ್ತಿದೆ.

3. ವ್ಯಾಜ್ಯದ ಜಮೀನಿನ ಸರ್ವೇ ನಂ. 3 ಎಂದು ಇರುತ್ತದೆ. ಸದರಿ ಜಮೀನಿನಲ್ಲಿ 7 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಯಾವುದೇ ಬೆಳೆ ಇರುವುದಿಲ್ಲ, ಬೀಡು ಬಿದ್ದಿರುತ್ತದೆ. ಸದರಿ ಜಮೀನನ್ನು ನಾನು ನೋಡಿದ್ದೇನೆ ಅದು ನಮ್ಮ ಜಮೀನಿನ ಪಕ್ಕದಲ್ಲಿರುತ್ತದೆ. ಸಾಕ್ಷಿಗೆ ಕೆಲವು ಛಾಯಾ ಚಿತ್ರಗಳನ್ನು ತೋರಿಸಿ ಸದರಿ ಛಾಯಾ ಚಿತ್ರಗಳು ಸರ್ವೆ ನಂ. 3 ಕ್ಕೆ ಸಂಬಂದಿಸಿದ್ದು ಅದರಲ್ಲಿ ಟಮೋಟೋ ಹಾಗೂ ಹೂವು ಹಾಗೂ ಮಾವಿನ ಗಿಡಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಯೂ 14 ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆಗೆ ನಿಡಿ–1 ರಿಂದ 14 ಎಂದು ಹಾಗೂ ಅದಕ್ಕೆ ಸಂಬಂದಿಸಿದ ಸಿಡಿಯನ್ನು ನಿಡಿ–15 ಎಂದು ಗುರುತಿಸಲಾಯಿತು. ಸದರಿ ಛಾಯಾಚಿತ್ರಗಳಲ್ಲಿ 9 ನೇ ಪ್ರತಿವಾದಿ ಆರ್. ನಾರಾಯಣಗೌಡ ಬಿನ್ ರಾಮೇಗೌಡ ಹಾಗೂ ಅವರ ಹೆಂಡತಿ ಇರುತ್ತಾರೆ ಎಂದರೆ ಸರಿ.

4. ಸರ್ವೇ ನಂ. 3/1 ರಲ್ಲಿ 7 ಎಕರೆ ಇರುವುದಿಲ್ಲ ಅದು 7 ಎಕರೆ 21 ಗುಂಟೆ ಇರುತ್ತದೆ ಎಂದರೆ ಸರಿ. ಅದರ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಸದರಿ ಜಮೀನು ಮೊದಲು ರಾಮಸ್ವಾಮಿ, ವೆಂಕಟರಾಮಪ್ಪ ಹಾಗೂ ವೆಂಕಟಪ್ಪ ರವರಿಗೆ ಸೇರಿದ್ದು ಅವುಗಳನ್ನು ಬೇರೆ ಬೇರೆ ಪತ್ರಗಳ ಮೂಲಕ 9 ನೇ ಪ್ರತಿವಾದಿ ಆರ್. ನಾರಾಯಣಗೌಡ ರವರ ತಂದೆಯಾದ ರಾಮೇಗೌಡ ರವರಿಗೆ ನೊಂದಣಿ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯೂ ಅಂತ ಹೇಳುತ್ತಾರೆ ಆದರೆ ಇಲ್ಲಿಯವರೆಗೆ ಭಾಗ ಆಗಿಲ್ಲ ಎಂದು ನುಡಿಯುತ್ತಾರೆ.

5. ರಾಮೇಗೌಡ ರವರು ಜೀವಂತ ಇದ್ದ ತನಕ ಅವರೇ ಸ್ವಾಧೀನದಲ್ಲಿದ್ದರೂ ಎಂದರೆ ಸರಿಯಲ್ಲ. ರಾಮೇಗೌಡ ರವರು ತೀರಿಕೊಂಡ ನಂತರ ಅವರ ಮಗ ನಾರಾಯಣಗೌಡ ಹಾಗೂ ಮಕ್ಕಳು ಅನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ರಿಂದ 14 ರ ಛಾಯಾ ಚಿತ್ರಗಳಲ್ಲಿ ಕಾಣಿಸುವಂತೆ ಟಮೋಟೋ, ಹೂವು ಹಾಗೂ ಮಾವಿನ ಗಿಡಗಳು ಬೆಳೆದು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ರಾಮೇಗೌಡ ರವರು ತೀರಿಕೊಂಡ ನಂತರ ಪಹಣಿಗಳು ನಾರಾಯಣಗೌಡ ರವರ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವ್ಯಾಜ್ಯದ ಜಮೀನಾದ ಸರ್ವೇ ನಂ.3/1 ರಲ್ಲಿ ವಾದಿಯವರು ಹಾಗೂ 1 ರಿಂದ 8 ನೇ ಪ್ರತಿವಾದಿಗಳು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

6. ಸರ್ವೇ ನಂ. 5 ರಲ್ಲಿ 2 ಎಕರೆಯನ್ನು ತಾಮಟಿ ಗೋವಿಂದಪ್ಪನಿಂದ 9 ನೇ ಪ್ರತಿವಾದಿ ನಾರಾಯಣಗೌಡನ ಅಜ್ಜ 1968 ರಲ್ಲಿ ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 5 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸರ್ವೇ ನಂ. 5 ರಲ್ಲಿ 2 ಎಕರೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಜಮೀನು ವಾದಿಯವರ ಸ್ವಾಧೀನದಲ್ಲಿದೆ ಎಂದರೆ ಸರಿ. ಈ ಕೇಸಿನ ವಿಚಾರ ನನಗೆ ಏನೂ ಗೊತ್ತಿಲ್ಲದೇ ಇದ್ದರೂ ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯವರಿಗೆ ವ್ಯಾಜ್ಯದ ಜಮೀನಿನಲಿ ಭಾಗದ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:ಶ್ರೀ ಕೆ ಎನ್ ಆರ್., ವಾದಿ ಪರ ವಕೀಲರಿಂದಃ**

7. ಸರ್ವೇ ನಂ. 3/1 ಹಾಗೂ 5 ರ ಜಮೀನುಗಳ ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳಿಗೆ ನನ್ನ ಜಮೀನು ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲು: ಶ್ರೀ ಎಂ ಎಲ್ ವಿ., 9 ರಿಂದ 11 ನೇ ಪ್ರತಿವಾದಿ ಪರ ವಕೀಲರಿಂದ**

8. ಸರ್ವೆ ನಂ. 5 ರ ಜಮೀನಿನ ಪಶ್ಚಿಮ ದಿಕ್ಕಿಗೆ ನನ್ನ ಜಮೀನು ಬರುತ್ತದೆ. ನನ್ನ ಜಮೀನಿನ ಸರ್ವೇ ನಂಬರ್ ಕೂಡ 5 ಆಗಿರುತ್ತದೆ. ಸರ್ವೇ ನಂ. 3/1 ರ ಯಾವ ದಿಕ್ಕಿಗೆ ನನ್ನ ಜಮೀನು ಬರುತ್ತದೆ ಎಂದು ಹೇಳಲು ಬರುವುದಿಲ್ಲ. ಸರ್ವೇ ನಂ. 3/1 ಹಾಗೂ 5 ರ ಜಮೀನುಗಳ ಪಕ್ಕದಲ್ಲಿ ನನ್ನ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.